ಎನ್ನುತಕ್ಕಂಥ ಮಾತನ್ನು ಭೂಮಾಲೀಕರು ಹೇಳಿಕಳಿಸಿದ್ದಾರೆ ಮತ್ತು ಭೂ ಸ್ವಾಧೀನ ಪಡಿಸಿಕೊಂಡ ನಂತರ ಭೂಮಾಪನ ಅಧಿಕಾರಿಗಳು ಸರ್ವೇಯರ್‌ನ್ನು ಕಳಿಸಿದಂಥ ಸಂದರ್ಭದಲ್ಲಿ ಸರ್ವೇಯರ್ ಹೋದಾಗ ಅವರ ಕೆಲಸಕ್ಕೆ ಅಡ್ಡಿಪಡಿಸಿ ಕಳಿಸಿದ್ದಾರೆ. ಈ ವಿಚಾರ ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಇನ್ನೊಂದು ವಿಚಾರ ಹೇಳುವುದಾದರೆ, ಈಗಾಗಲೇ ಏನು ಹಕ್ಕು ಪತ್ರಗಳನ್ನು ಕೊಟ್ಟಿದ್ದಾರೆ, ಆ ರೀತಿ ಕೊಟ್ಟಿರತಕ್ಕ ಜಾಗದಲ್ಲಿ ಅಕ್ರಮವಾಗಿ ೮–೧೦ ಮನೆಗಳನ್ನು ಏನು ಕಟ್ಟಿದ್ದಾರೆ, ಆ ಮನೆಗಳನ್ನು ಹೊಡೆಸಿಹಾಕಿ ಇವರಿಗೆ ಕೊಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಲ್ಲಿರತಕ್ಕ ಜಮೀನನ್ನು ಬಹಳ ಹಿಂದೆ ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆ, ಆದರೆ ಅದರ ಬಗ್ಗೆ ಡಿಸ್ಪ್ಯೂಟ್ ಇದೆ. ಅಲ್ಲಿರತಕ್ಕ ಕೆಲವರು ಅಬ್‌ಸ್ಟ್ರಕ್ಟ್ ಮಾಡಿರುವುದು ನಿಜ; ಪೋಲೀಸ್ ರಕ್ಷಣೆ ಕೇಳಿದ್ದಾರೆ, ನಿಜ. ಇದನ್ನು ಉತ್ತರದಲ್ಲಿ ಹೇಳಿದ್ದೇನೆ. ಇದು ಮಾನ್ಯ ಸಿದ್ದರಾಮಯ್ಯನವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಅವರು ಎರಡೂ ಕಡೆಯವರನ್ನು ಕರೆದು ರಾಜಿ ಮಾಡಿಸುತ್ತೇನೆಂದು ಮತ್ತು ಅದಕ್ಕಾಗಿ ಸಮಯ ಕೇಳಿದ್ದಾರೆ. ನಾನು ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ಆದ್ದರಿಂದ ಸದ್ಯದಲ್ಲೇ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತೇನೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಮಂತ್ರಿಗಳು ಈ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ, ಸಂತೋಷ. ಆದರೆ ಒಂದು ಮಾತನ್ನು ಹೇಳುತ್ತೇನೆ. ಈಗಾಗಲೇ ೯೬ ಮಂದಿಗೆ ಏನು ಹಕ್ಕುಪತ್ರಗಳನ್ನು ವಿತರಣೆ ಮಾಡಿದ್ದಾರೆ, ಆ ಜಾಗದಲ್ಲಿ ಈಗಾಗಲೇ ಅಕ್ರಮವಾಗಿ ೮–೧೦ ಮನೆಗಳನ್ನು ಏನು ಕಟ್ಟಿದ್ದಾರೆ, ಆ ಮನೆಗಳನ್ನು ಹೊಡೆಸಿ ಹಾಕಿ ಯಾರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದಾರೋ ಅವರಿಗೆ ಕೊಡುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸದ್ಯದಲ್ಲೇ ಅಂದರೆ ೧೬ನೇ ತಾರೀಖು ಮೈಸೂರಿಗೆ ಬರುತ್ತಾ ಇದ್ದೇನೆ. ಆಗ ಇದನ್ನು ನೋಡುತ್ತೇನೆ.

## ಕೈಗಾರಿಕೆಯ ಅಭಿವೃದ್ಧಿಗಾಗಿ ಪ್ರೋತ್ಸಾಹ ಸೌಲಭ್ಯಗಳು

೧೩೭೮. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ ?

ಅ) ಕರ್ನಾಟಕ ಸರ್ಕಾರವು ಉದ್ದಿಮೆಗಳ ಬೆಳವಣಿಗೆ ದೃಷ್ಟಿಯಿಂದ ಜನತೆಗೆ ಅನೇಕ ಸಹಾಯ ಕೊಡುವ ಆಶ್ವಾಸನೆ ಕೊಟ್ಟು ಇನ್ಸೆಂಟೀವ್ ಜಾಹಿರ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮಾರಾಟ ತೆರಿಗೆ ವಿದ್ಯುದೀಪಗಳ ಮೇಲಿನ ಕರೆ ಕೊಟ್ಟಷ್ಟು ಹಣದ ಬದಲಾಗಿ ಬಡ್ಡಿ ರಹಿತ ಸಾಲ ಕೊಡುವುದಾಗಿ ಹೇಳಿ, ಕೇಳಿದರಿಗೆ ಕೊಡದೆ ಇರುವುದು ನಿಜವಲ್ಲವೇ ?

ಇ) ಈ ರೀತಿ ಆಶ್ವಾಸನೆ ಕೊಟ್ಟು ಈಡೇರಿಸದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಹೆಚ್. ಪಾಟೀಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು). —

ಅ) ಹೌದು,

ಆ) ನಿಜವಲ್ಲ. ಕೊಟ್ಟಿರುವ ಮಾರಾಟ ತೆರಿಗೆ ಮಾತ್ರ ಸಾಲವಾಗಿ ಕೊಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಎಲೆಕ್ಟ್ರಿಸಿಟಿ ಟ್ಯಾಕ್ಸ್ ಬಗ್ಗೆ ಉತ್ತರದಲ್ಲಿ ಇಲ್ಲ ಎಂದು ಕೊಟ್ಟಿದ್ದಾರೆ, ಇದೆ ಎಂದು ಹೇಳಿದರೆ ಸಾಕು. ಇದನ್ನು ನಾನು ದೊಡ್ಡ ಚುಕ್ಕಿ ಮಾಡಿ ಕೇಳಲಿಕ್ಕೆ ಹೋಗುವುದಿಲ್ಲ. ಇಲ್ಲ ಎಂದು ಹೇಳಿದಿರಿ, ಇದೆ ಎಂದರೆ ಮುಗಿದು ಹೋಯಿತು. ಇಂಟೆನ್ಸಿವ್ ಕೊಟ್ಟಿದ್ದರೂ ಸಹ ಯಾರ್ಯಾರು ಅರ್ಹರಿದ್ದಾರೋ ಅವರಿಗೆ ಕೊಡಲಿಕ್ಕೆ ಹಣ ಇಲ್ಲ ಎಂದು ಒಂದು ಕಡೆ ಅಧಿಕಾರಸ್ಥರು ಹೇಳುತ್ತಾರೆ ಮತ್ತು ಹಣ ಸಾಕಷ್ಟು ಇದೆ, ವಿಜಾನೆಯಲ್ಲಿ ಬೇಕಾದಷ್ಟು ಇದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ, ಇದರಲ್ಲಿ ಯಾವುದು ಸತ್ಯ. ಈಗಲಾದರೂ ಅರ್ಹರಾದವರಿಂದ ಅರ್ಜಿಗಳು

ಬಂದು ನಿಖಾಲೆ ಮಾಡಂವುದಕ್ಕೆ ಅಧಿಕಾರಸ್ಥರು ಇಟ್ಟುಕೊಂಡಿದ್ದಾರೋ ಅಂತಹವುಗಳನ್ನು ಒಂದು ವಾರದೊಳಗೆ ನಿಖಾಲೆ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ನಮ್ಮ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಔದ್ಯೋಗಿಕ ನೀತಿಯ ಆಧಾರದ ಮೇಲೆ ನಾವು ೧೯೫೩ರಲ್ಲಿ ಇಂಡಸ್ಟ್ರಿಯಲ್ ಪಾಲಿಸಿ ಅನೌನ್ಸ್ ಮಾಡಿದೆವು. ಅದರ ಪ್ರಕಾರ ಇಂಟೆನ್ಸಿವ್ ಕೊಡುವಾಗ ೧೯೫೪-೫೫ರವರೆಗೆ ಎಷ್ಟು ಉದ್ಯಮಗಳಿವೆ, ಅವು ಯಾವರೀತಿ ಪ್ರೊಗ್ರೆಸ್ ಆಗಿವೆಯೋ ಅದರ ಮೇಲೆ ಕೊಟ್ಟು ಕೊಂಡು ಬಂದಿದ್ದೇವೆ. ೧೯೫೫-೫೬ ಮತ್ತು ಈ ವರ್ಷದ ಹಣಕಾಸಿನ ಕೊರತೆಯಿಂದಾಗಿ ಕೆಲವು ಉದ್ಯಮಗಳಿಗೆ ನಾವೇ ಕನ್‌ವಿನ್ಸ್ ಆಗಿದ್ದೇವೊ ಅವುಗಳಿಗೆ ಈಗ ಕೊಡುವ ಅವಶ್ಯಕತೆ ಇಲ್ಲ, ಇನ್ನು ಕೆಲವು ಉದ್ಯಮಗಳಿಗೆ ಅವಶ್ಯಕತೆ ಇದೆ, ತಕ್ಷಣ ಕೊಡುವುದಕ್ಕಾಗುವುದಿಲ್ಲ. ಆದರೆ ಯಾವುದಾದರೂ ಒಂದು ಉದ್ಯಮ ಡಿಸರ್ವಿಂಗ್ ಇದ್ದು ಕೊಡಬೇಕಾದ್ದು ಬದ್ಧವಾದಾಗ ಈ ವರ್ಷದ ಪಟ್ಟಿಯಲ್ಲಿ ಅದನ್ನು ಸೇರಿಸಿಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಬಹಳ ಸಂತೋಷ. ಆದರೆ ಇಂಟೆನ್ಸಿವ್ ಕೊಡುತ್ತೇವೆಂದು ವಚನ ಕೊಟ್ಟಮೇಲೆ ಅದಕ್ಕೆ ಬದ್ಧರಾಗಬೇಕಾಗುತ್ತದೆ. ತಮ್ಮಲ್ಲಿ ಹಣದ ಕೊರತೆ ಇದ್ದರೆ ದೀಪಕ್ ಕೇಬಲ್ಸ್‌ಗೆ ೩ ಕೋಟಿ ಕೊಟ್ಟು ಇತರೇ ಅನೇಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಹಣ ಇಲ್ಲ ಎಂದ ಹಾಗೆ ಆಗುತ್ತದೆ. ಆದುದರಿಂದ ಇನ್ನು ಮೇಲಾದರೂ ಯೋಗ್ಯವಾಗಿರತಕ್ಕದ್ದನ್ನು ಪುನರ್ವಿಮರ್ಶೆ ಮಾಡಿ ತೀವ್ರ ಹಣ ಸಿಗುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಅವರ ಸಲಹೆಯನ್ನು ಒಪ್ಪುತ್ತೇನೆ. ಆದರೆ ಲೋನ್ ಓನ್ಲಿ ಸೇಲ್ಸ್ ಟ್ಯಾಕ್ಸ್‌ಗೆ, ಎಲೆಕ್ಟ್ರಿಸಿಟಿ ಟ್ಯಾಕ್ಸ್‌ಗೆ ಎಕ್ಸಂಪ್ಷನ್ ಬೇರೆ. ಆದಂ ಲೋನ್ ಒಳಗೆ ಸೇರುವುದಿಲ್ಲ.

## ರಿಯಾಯಿತಿ ಬೆಲೆಯ ಧೋತಿ ಮಂತ್ತು ಸೀರೆಗಳ ಯೋಜನೆ

೩. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).—ಮಾನ್ಯ ಸಣ್ಣ ಪ್ರಮಾಣದ ರಾಜ್ಯ ಕೈಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

೮) ರಿಯಾಯಿತಿ ಬೆಲೆಯ ಧೋತಿ ಮತ್ತು ಸೀರೆ ಯೋಜನೆ ಎಷ್ಟು ತಾಲ್ಲೂಕುಗಳಲ್ಲಿ ಜಾರಿಗೆ ಬಂದಿದೆ ?

ಆ) ಯಾವ ಆಧಾರದ ಮೇಲೆ ಈ ತಾಲ್ಲೂಕುಗಳನ್ನು ಆರಿಸಲಾಗಿದೆ ?

೫) ಪ್ರತಿಯೊಂದು ತಾಲ್ಲೂಕುಗಳಲ್ಲಿ ಫಲಾನುಭವಿಗಳ ಸಂಖ್ಯೆ ಎಷ್ಟು ಮತ್ತು ಪ್ರತಿಯೊಂದು ತಾಲ್ಲೂಕುಗಳಲ್ಲಿ ಎಷ್ಟು ಧೋತಿ ಮತ್ತು ಸೀರೆಗಳನ್ನು ಹಂಚಲಾಗಿದೆ ?

ಈ) ಉಳಿದ ತಾಲ್ಲೂಕುಗಳಲ್ಲಿ ಯಾವಾಗ ಈ ಯೋಜನೆಯನ್ನು ಜಾರಿಗೆ ತರಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಕೈಗಾರಿಕಾ ರಾಜ್ಯ ಮಂತ್ರಿಗಳು).—

೮) ೯೫.

ಆ) ಈ ಮೇಲಿನ ತಾಲ್ಲೂಕುಗಳನ್ನು ಕನ್ನಡ ವರ್ಣಮಾಲೆಯ ಪ್ರಕಾರ ಆರಿಸಲಾಗಿದೆ.

೫) ವಿವರವಾದ ಪಟ್ಟಿಯನ್ನು ಲಗತ್ತಿಸಿದೆ.

ಈ) ಇನ್ನುಳಿದ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಮಾರ್ಚ್ ೧೯೫೬ ರಿಂದ ಜುಲೈ ೧೯೫೬ರ ರೊಳಗೆ ತರಲಾಗುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ರಿಯಾಯಿತಿ ಬೆಲೆಯಲ್ಲಿ ಧೋತಿ ಮತ್ತು ಸೀರೆ ಯೋಜನೆಯನ್ನು ಈಗ ೯೫ ತಾಲ್ಲೂಕುಗಳಲ್ಲಿ ಜಾರಿಗೆ ತಂದಿದ್ದೇವೆ ಎಂದು ಹೇಳಿದ್ದಾರೆ. ಆದರೆ ಒಂದು ತಾಲ್ಲೂಕನ್ನು ನೀವು ಆಯ್ಕೆ ಮಾಡಿದಮೇಲೆ ಆ ತಾಲ್ಲೂಕಿನ ಒಳಗೆ ಇರತಕ್ಕ ಹಳ್ಳಿಗಳನ್ನು ಆಯ್ಕೆ ಮಾಡಿದ್ದೀರಾ, ಏಕೆಂದರೆ ಎಲ್ಲಾ ಹಳ್ಳಿಗಳಲ್ಲೂ ಇದನ್ನು ಜಾರಿಗೆ ಕೊಟ್ಟಿಲ್ಲ. ಆದ್ದರಿಂದ ಇದನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡಿದಿರಿ ಎನ್ನುವುದು ಪ್ರಶ್ನೆ. ಎರಡನೆಯದು, ವಿವರವಾದ ಪಟ್ಟಿಯನ್ನು